ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಎರಡು ಕ್ಲಾರಿಫಿಕೇಷನ್ಸ್ ಕೇಳಿದ್ದೆ. ಆರ್.ಡಿ.ಪಿ.ಆರ್. ಮಂತ್ರಿಯವರಿಗೂ ಕೇಳಿದ್ದೇನೆ.

ಉಪಾಧ್ಯಕ್ಷರು : ನೀವು ಈ ತರಹ ಮಾಡಿದರೆ ಹೇಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಕೊಳವೆಬಾವಿಗೆ ಏನಾದರೂ ಹಣ ಕೊಡುತ್ತೀರಾ ಎಂದು ಸನ್ಮಾನ್ಯ ಪ್ರಕಾಶ್ ಅವರಿಗೆ ಕೇಳಿದ್ದೆ. ಅವರ ಕೈಯಲ್ಲಿ ಒಂದು ಕ್ಲಾರಿಫಿಕೇಷನ್ ಕೊಡಿಸಬೇಕು. ಕಾಲಿಂಗ್ ಅಟೆನ್‌ಷನ್ ಕೇಳುವುದೇ ಎರಡು-ಮೂರು ಕ್ಲಾರಿಫಿಕೇಷನ್‌ಗಳನ್ನು ಕೇಳುವುದಕ್ಕೆ. ಇಲ್ಲದಿದ್ದರೆ ಶೂನ್ಯವೇಳೆಯಲ್ಲೇ ಇದನ್ನು ರೈಸ್ ಮಾಡುತ್ತಿದ್ದೆವು. ಸುಮ್ಮನೆ ಹೇಳಿದ್ದನ್ನು ಕೇಳಿ ಕುಳಿತುಕೊಳ್ಳುವುದಕ್ಕಲ್ಲ ಕಾಲಿಂಗ್ ಅಟೆಷನ್ ನೋಟೀಸ್ ಕೊಡುವುದು. ಸರ್ಕಾರ ಏನು ಹೇಳುತ್ತಾರೆ ಅದರ ಮೇಲೆ ಪ್ರಶ್ನೆ ಮಾಡುವ ಅಧಿಕಾರ ಇಟ್ಟುಕೊಂಡೇ ನೋಟೀಸ್ ಕೊಡುವುದು.

ಉಪಾಧ್ಯಕ್ಷರು : ನೀವು ಕೇಳಿದ್ದಕ್ಕೆಲ್ಲಾ ಸರಿಯಾದಂಥ ಉತ್ತರ ಕೊಟ್ಟಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ. ನಾನು ಒಂದು ಕುಡಿಯುವ ನೀರು, ಇನ್ನೊಂದು ವಿದ್ಯುತ್ ಪೂರೈಕೆ ಬಗ್ಗೆ ಸಿಬ್ಬಂದಿ ಬಂದು ಕೇಳಿದಾಗ ನಾನು ಹೇಳಿದ್ದೆ, ಇದು ಎರಡಕ್ಕೂ ಉತ್ತರ ಬೇಕಾಗಿರುವುದರಿಂದ ಮುಖ್ಯಮಂತ್ರಿಗಳಿಗೇ ಪ್ರಶ್ನೆ ಹಾಕಿದ್ದೇನೆ ಎಂದು ಹಾಗೆ ಇಲ್ಲದಿದ್ದರೆ ನಾನು ಪಂಚಾಯತ್‌ರಾಜ್ ಮಂತ್ರಿಗಳಿಗೆ ಕೇಳುತ್ತಿದ್ದೆ. ಈಗ ಅವರು ಬೋರ್‌ವೆಲ್ ಕೊರೆಯುವುದಕ್ಕೆ ಹಣ ಇಲ್ಲವೆಂದರೆ ಸ್ವಲ್ಪ ಹಣ ಕೊಡಿ ಎಂದು ಕೇಳಿದ್ದೇನೆ. ದಯಮಾಡಿ ಉತ್ತರ ಕೊಡಿಸಿ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್‌ಮಂತ್ರಿ) : ಮಾನ್ಯ ಉಪಾಧ್ಯಕ್ಷರೇ, ಈ ಕೇಂದ್ರಸರ್ಕಾರದಿಂದ ಈ ಹೆಚ್ಚುವರಿ ಹಣವನ್ನು ನಾವು ಕುಡಿಯುವ ನೀರಿನ ವೆಚ್ಚಕ್ಕಾಗಿ ಬಿಡುಗಡೆ ಮಾಡಿದ್ದೇವೆ. ಅದು ತುಮಕೂರು ಜಿಲ್ಲೆಗೆ ಹತ್ತಿರ ಹತ್ತಿರ ಒಂದು ಕೋಟಿಗಿಂತ ಹೆಚ್ಚು ಹಣವನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಿದ್ದೇವೆ. ಅವರು ಹೇಳಿದಂತೆ ಕೊಳವೆಬಾವಿಗಳ ಆಳ ಜಾಸ್ತಿಯಾದಂತೆ ಕೈಪಂಪುಗಳನ್ನು ಅಳವಡಿಸಿಕೊಂಡಾಗ ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕಾಗಿಯೇ ಒಂದು ಕಿರು ನೀರು ಸರಬರಾಜು ಯೋಜನೆ ಮಾಡಿ ಎಂದು ಹೇಳಿದ್ದಾರೆ. ಅದರ ಹಣದ ಲಭ್ಯತೆಯನ್ನು ನೋಡಿಕೊಂಡು ಮತ್ತು ಅವರು ಯಾವ್ಯಾವ ಕಡೆಗೆ ಹಾಕಿ ಇದನ್ನು ಈ ನೀರು ಸರಬರಾಜು ಯೋಜನೆಯನ್ನು ಮಾಡಬೇಕು ಎಂದು ಕಳುಹಿಸಿಕೊಟ್ಟಿದ್ದಾರೆ ಅದನ್ನು 1998-99ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಂಡು ಆ ಕೆಲಸವನ್ನು ಮಾಡಿ ಎಂದು ಆದೇಶ ಕೊಡುತ್ತೇನೆ.

ಕಂಪ್ಲಿ ಸಕ್ಕರೆ ಕಾರ್ಖಾನೆ ಖಾಸಗೀಯವರಿಗೆ ಮಾರಾಟ

ಶ್ರೀ ಜಿ. ಶಂಕರೇಗೌಡ (ಹೊಸಪೇಟೆ) : ಮಾನ್ಯ ಉಪಾಧ್ಯಕ್ಷರೇ, ಕಂಪ್ಲಿ ಸಕ್ಕರೆ ಕಾರ್ಖಾನೆಯನ್ನು ಸರ್ಕಾರವು ಕೆಲವೊಂದು ಷರತ್ತುಗಳೊಂದಿಗೆ ಖಾಸಗಿಯವರಿಗೆ ಮಾರಾಟ ಮಾಡಿರುವುದರಿಂದ ಅಲ್ಲಿನ ಕಾರ್ಮಿಕರಿಗೆ ಆಗುತ್ತಿರುವ ತೊಂದರೆ ಬಗ್ಗೆ ಮಾನ್ಯ ಸಕ್ಕರೆ ಮಂತ್ರಿಗಳ ಗಮನ ಸೆಳೆಯುತ್ತೇನೆ.

+ ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಮಂತ್ರಿ) : ಮಾನ್ಯ ಉಪಾಧ್ಯಕ್ಷರೇ, ನನ್ನ ಹೇಳಿಕೆಯನ್ನು ಓದುತ್ತೇನೆ.

ಕಂಪ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯು 1958ರಲ್ಲಿ ಆರಂಭವಾಗಿರುತ್ತದೆ. ಆರಂಭಿಕವಾಗಿ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯ ದಿನವಹಿ 800 ಟನ್ ಇದ್ದು ನಂತರ 1200 ಟನ್‌ಗೆ ಹೆಚ್ಚಿಸಲಾಗಿರುತ್ತದೆ. ಕಾರ್ಖಾನೆಯು ಹಲವಾರು ವರ್ಷಗಳಿಂದ ಸಾಮರ್ಥ್ಯಕ್ಕೆ ತಕ್ಕಂತೆ ಕಬ್ಬು ಅರೆಯದೆ ಆರ್ಥಿಕವಾಗಿ ದುರ್ಬಲವಾಗುತ್ತಾ ಬಂದಿರುತ್ತದೆ. ಈ ಕಾರ್ಖಾನೆಯ ವಿಶೇಷಾಧಿಕಾರಿಗಳನ್ನಾಗಿ ಬಳ್ಳಾರಿ ಜಿಲ್ಲಾಧಿಕಾರಿಯವರನ್ನು ದಿನಾಂಕ 12-3-95ರಂದು ನೇಮಿಸಿ ತದನಂತರ ಅವಧಿಯನ್ನು ಆಗಾಗ್ಗೆ ವಿಸ್ತರಿಸಲಾಗಿರುತ್ತದೆ.

2. ಈ ಕಾರ್ಖಾನೆಯ ಕಾರ್ಯವ್ಯಾಪ್ತಿಯಲ್ಲಿ ಹೊಸಪೇಟೆಯ 23 ಗ್ರಾಮಗಳು, ಬಳ್ಳಾರಿ ತಾಲ್ಲೂಕಿನ 1 ಗ್ರಾಮ, ಸಂಡೂರು ತಾಲ್ಲೂಕಿನ 3 ಗ್ರಾಮಗಳು ಸೇರಿರುತ್ತದೆ. ಈ ಕಾರ್ಖಾನೆಯು ಪ್ರತಿ ವರ್ಷವೂ ಕಬ್ಬಿನ ಕೊರತೆಯಿಂದಾಗಿ ನಷ್ಟವನ್ನು ಅನುಭವಿಸುತ್ತಾ ಬಂದಿದ್ದು ದಿನಾಂಕ31-3-94ಕ್ಕೆ ರೂ 1003.27 ಲಕ್ಷ ಕ್ರೋಢೀಕೃತ ನಷ್ಟದಲ್ಲಿರುತ್ತದೆ. ಈ ಕಾರ್ಖಾನೆಯು 1993-94ನೇ ಸಾಲಿನಿಂದ ಸ್ಥಗಿತಗೊಂಡಿರುತ್ತದೆ. ಕಾರ್ಖಾನೆಯು ಹೊಂದಿರುವ ಷೇರುಧನ, ಸರ್ಕಾರದ, ಜಿಲ್ಲಾ ಬ್ಯಾಂಕಿನ ಮತ್ತಿತರ ಮುಖ್ಯ ಸಂಸ್ಥೆಗಳಿಂದ ಪಡೆದಿರುವ ಸಾಲದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

(ಲಕ್ಷ ರೂ.ಗಳಲ್ಲಿ)

1)	ಷೇರುಧನ : ಸದಸ್ಯರ ಷೇರುಧನ	-	82.87
	ಸರ್ಕಾರದ ಷೇರುಧನ	-	58.00
2)	ಸರ್ಕಾರದ ಸಾಲ		263.08
3)	ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಸಾಲ		279.55
4)	ಎಸ್.ಡಿ.ಎಫ್. ಸಾಲ		47.99
5)	ಖರೀದಿ ತೆರಿಗೆ ಸಾಲ		46.00

ಇದಲ್ಲದೆ ಈ ಕಾರ್ಖಾನೆಯನ್ನು ಸಮಾಪನೆಗೊಳಿಸಿದ ಕಾಲಕ್ಕೆ ರೂ3.00 ಕೋಟಿಗೂ ಮೇಲ್ಪಟ್ಟು ವೇತನ ಬಾಕಿ, ಕೆ.ಇ.ಬಿ. ಹಾಗೂ ಹಲವು ಸಂಸ್ಥೆಗಳಿಗೆ ಕೊಡಬೇಕಾದ ಬಾಕಿಗಳಿರುತ್ತವೆ.

3) ಈ ಕಾರ್ಖಾನೆಯನ್ನು ಪುನಃ ಶ್ಚೇತನಗೊಳಿಸುವ ಸಂಬಂಧ ಕಾರ್ಖಾನೆಯ ತಾಂತ್ರಿಕ, ಆರ್ಥಿಕ ಹಾಗೂ ಅಭಿವೃದ್ಧಿ ವಿಷಯಗಳಿಗೆ ಕುರಿತಂತೆ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆಗಳ ಮಹಾಮಂಡಳದಿಂದ ವರದಿಯನ್ನು ಪಡೆಯಲಾಯಿತು. ಕಬ್ಬು ಅಭಿವೃದ್ಧಿ ಹಾಗೂ ಕಾರ್ಖಾನೆಯು ಸಾಮರ್ಥ್ಯವಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಸುಮಾರು ರೂ. 18.00 ಕೋಟಿ ಬೇಕಾಗಬಹುದೆಂದು ಹಾಗೂ 2500 ಟನ್‌ಗೆ ಹೆಚ್ಚಿಸಲು ಸುಮಾರು ರೂ 35.00 ಕೋಟಿ

ಬೇಕಾಗಬಹುದೆಂದು ಅಂದಾಜು ಮಾಡಲಾಗಿರುತ್ತದೆ. ಇದಾದನಂತರ ಟಾಟಾ ಸಲಹೆಗಾರರಿಂದ ಪುನಃಶ್ಚೇತನದ ಬಗ್ಗೆ ವರದಿಪಡೆಯಲಾಯಿತು. ಪುನಃಶ್ಚೇತನಕ್ಕೆ ಸುಮಾರು ರೂ 705.42 ಲಕ್ಷ ಆಗತ್ಯವಿದ್ದು, ಇದನ್ನು ವೆಚ್ಚ ಮಾಡಿದರೂ ಕೇವಲ7-8 ವರ್ಷಗಳು ಮಾತ್ರ ಕಾರ್ಖಾನೆ ನಡೆಯುವುದೆಂದು ತಿಳಿಸಿರುತ್ತಾರೆ.

4) ಕಾರ್ಖಾನೆಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ದಿನಾಂಕ 18-4-94ರಂದು ಸಹಕಾರ ಸಂಘಗಳ ಕಾಯ್ದೆ ಕಲಂ 64ರ ಪ್ರಕಾರ ವಿಚಾರಣೆಗೆ ಆದೇಶಿಸಲಾಯಿತು. ವರದಿಯು ದಿನಾಂಕ 15-5-95 ರಂದು ಬಂದಿರುತ್ತದೆ. ಅಪಾರ ಹಣದ ಅವಶ್ಯಕತೆ ಇದ್ದುದರಿಂದ ಸಹಕಾರ ಕ್ಷೇತ್ರದಲ್ಲಿ ಈ ಕಾರ್ಖಾನೆಯನ್ನು ಪುನಃಶ್ಚೇತನಗೊಳಿಸುವ ಸಾಧ್ಯತೆ ಇರುವುದಿಲ್ಲವೆಂಬುದು ಮನವರಿಕೆಯಾಗಿ ದಿನಾಂಕ 21-7-95ರಂದು ಸಮಾಪನಗೊಳಿಸಿ ಗುಲ್ಬರ್ಗಾ ವಿಭಾಗದ ಸಂಯುಕ್ತ ನಿಬಂಧಕರನ್ನು ಸಮಾಪನಾಧಿಕಾರಿಗಳಾಗಿ ನೇಮಿಸಲಾಗಿರುತ್ತದೆ.

5) ಶ್ರೀ ಎಂ.ವಿ. ಸುಬ್ಬರಾವ್ ಎಂಬುವರು ಕಾರ್ಖಾನೆಯನ್ನು ರೂ. 801:00 ಲಕ್ಷಕ್ಕೆ ಖರೀದಿಸಿರುತ್ತಾರೆ. ದಿನಾಂಕ 18-3-96ರಂದು ಮಾರಾಟದ ಕರಾರು ಆಗಿರುತ್ತದೆ. 2) ಇದರ ಪ್ರಕಾರ ಖರೀದಿದಾರರು ಕರಾರು ಆದ10 ದಿನಗಳೊಳಗಾಗಿ ಶೇ.40 ರಷ್ಟು ಅಂದರೆ ರೂ.3,20,40,000.00 ಪಾವತಿಸಬೇಕಾಗುತ್ತದೆ. ಈ 4,80,60,000.00ವನ್ನು 6 ತಿಂಗಳೊಳಗಾಗಿ ಶೇ.18ರ ಬಡ್ಡಿ ಸಮೇತ ಪಾವತಿಸ ಬೇಕಾಗಿರುತ್ತದೆ. ಆದರೆ ಖರೀದಿದಾರರು ಈ ಷರತ್ತಿನ ಪ್ರಕಾರ ಪಾವತಿಸಿರುವುದಿಲ್ಲ.

6) ಕರಾರಿನ ಪ್ರಕಾರ ಪಾವತಿಸಬೇಕಾದ ಶೇ. 60 ರಷ್ಟನ್ನು ಪಾವತಿಸಲು ಸರ್ಕಾರ ಖರೀದಿದಾರರಿಗೆ ಪ್ರಥಮದಲ್ಲಿ ದಿನಾಂಕ31.12.96ರ ವರೆಗೆ, ನಂತರ ಫೆಬ್ರವರಿ97ರ ವರೆಗೆ ಹಾಗೂ ತದನಂತರ 30.9.97ರ ವರೆಗೆ ಅವಧಿಯನ್ನು ವಿಸ್ತರಿಸಿರುತ್ತದೆ. ಇದುವರೆಗೆ ಶೇ.60 ಬಾಕಿ ಮೊತ್ತದ ಪೈಕಿ ರೂ. 2.50 ಲಕ್ಷಗಳ ಅಸಲನ್ನು ಮಾತ್ರ ಪಾವತಿಸಿರುತ್ತಾರೆ.

7) **ಖರೀದಿದಾರರ ಕೋರಿಕೆ:**

ದಿನಾಂಕ 6.11.97ರ ಪತ್ರದಲ್ಲಿ ಖರೀದಿದಾರರು ಈ ಕೆಳಕಂಡಂತೆ ವೆಚ್ಚ ಮಾಡಿರುವುದಾಗಿ ತಿಳಿಸಿರುತ್ತಾರೆ.

(ಲಕ್ಷ ರೂ.ಗಳಲ್ಲಿ)

1)	ಸಮಾಪನಾಧಿಕಾರಿಯವರಿಗೆ ಪಾವತಿಸಿದ್ದು	575.40
2)	ವೇತನ ಪಾವತಿ	112.00
3)	ಹೆಚ್ಚುವರಿ ಯಂತ್ರೋಪಕರಣಗಳ ಜೋಡಣೆ	168.00
4)	ಕಬ್ಬು ಅಭಿವೃದ್ಧಿ	35.00
5)	ಕಾಮಗಾರಿ ಮತ್ತಿತರ ಕೆಲಸಗಳು	150.00
	ಒಟ್ಟು	**1040.40**

ಮೇಲ್ಕಂಡ ಅಂಶಗಳನ್ನು ನಮೂದಿಸಿ ಬಾಕಿ ಇರುವ ರೂ 225.40 ಲಕ್ಷದಲ್ಲಿ ರೂ. 100.00 ಲಕ್ಷವನ್ನು ಪಾವತಿಸುವುದಾಗಿಯೂ ಹಾಗೂ ಉಳಿದ ರೂ. 125.40 ಲಕ್ಷವನ್ನು 36 ತಿಂಗಳ ಅವಧಿಯಲ್ಲಿ ಕಂತುಗಳ ರೂಪದಲ್ಲಿ ಪಾವತಿಸುವುದಾಗಿ ತಿಳಿಸಿರುತ್ತಾರೆ. ಮುಂದುವರಿಸಿ ಬಾಕಿ ಉಳಿಯುವ ಮೊಬಲಗಿಗೆ ಸೂಕ್ತ ಆಸ್ತಿಯನ್ನು ಆಧಾರವಾಗಿ ಬಿಟ್ಟು ಉಳಿದ ಆಸ್ತಿಯನ್ನು ನೋಂದಾಯಿಸಿ ಕೊಡಬೇಕೆಂದು ಹಾಗೂ ಪೂರ್ಣ ಬಡ್ಡಿಯನ್ನು ಮನ್ನಾ ಮಾಡಿ ಕೊಡಬೇಕೆಂದು ಕೋರಿರುತ್ತಾರೆ. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಪೂರ್ಣ ಬಾಕಿಯನ್ನು ಪಾವತಿಸುವುದಕ್ಕೆ ಒಳಪಟ್ಟು ಶೇ.50ರಷ್ಟು ಬಡ್ಡಿ ಮನ್ನಾ ಮಾಡಬಹುದೆಂದು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದರು. ತದನಂತರ ಖರೀದಿದಾರರ ದಿನಾಂಕ6.11.97ರ ಪತ್ರವನ್ನು ಆಧರಿಸಿ ಖರೀದಿದಾರರು ರೂ.100.00 ಲಕ್ಷ ಪಾವತಿಸಿ ಉಳಿದಿದ್ದನ್ನು ದಿನಾಂಕ 6.11.97ರ ಪತ್ರವನ್ನು ಆಧರಿಸಿ ಖರೀದಿದಾರರು ರೂ. 100.00 ಲಕ್ಷ ಪಾವತಿಸಿ ಉಳಿದಿದ್ದನ್ನು 36 ತಿಂಗಳ ಅವಧಿಯಲ್ಲಿ ಪಾವತಿಸುವುದಕ್ಕೆ ಅನುಮತಿ ನೀಡಬಹುದೆಂದು ದಿನಾಂಕ7.11.97ರ ಪತ್ರದಲ್ಲಿ ಸಕ್ಕರೆ ನಿರ್ದೇಶಕರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಈ ಪ್ರಸ್ತಾವನೆಗಳಿಗೆ ಸಮ್ಮತಿ ದೊರೆತಿರುವುದಿಲ್ಲ.

ದಿನಾಂಕ 9.1.98ರ ಪತ್ರದಲ್ಲಿ ಖರೀದಿದಾರರು ಹೊಸ ಪ್ರಸ್ತಾವನೆಯನ್ನು ಮುಂದಿಟ್ಟಿರುತ್ತಾರೆ. ಇದು ಈ ಕೆಳಕಂಡಂತೆ ಇರುತ್ತದೆ :

1) ಬಡ್ಡಿ ಮನ್ನಾ ಮಾಡಬೇಕು

2) ಬಾಕಿ ಇರುವ ರೂ. 226.00 ಲಕ್ಷವನ್ನು 6 ತಿಂಗಳು ಕಳೆದ ನಂತರ 30 ಕಂತುಗಳಲ್ಲಿ ಪಾವತಿಸುವ ಸೌಲಭ್ಯವನ್ನು ಒದಗಿಸಿ ಕೊಡಬೇಕು.

3) ಬಾಕಿ ಇರುವ ಮೊಬಲಗಿಗೆ ಸೂಕ್ತ ಆಸ್ತಿಯನ್ನು ಕಾಯ್ದಿರಿಸಿ ಉಳಿದಿದ್ದನ್ನು ಬ್ಯಾಂಕಿನಿಂದ ದುಡಿಯುವ ಬಂಡವಾಳ ಪಡೆಯುವುದಕ್ಕೋಸ್ಕರ ನೋಂದಾಯಿಸಿ ಕೊಡ ಬೇಕು.

4) ಪರವಾನಿಗೆಯ ವರ್ಗಾವಣೆ, ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮತಿ ಮತ್ತಿತರ ವ್ಯವಸ್ಥೆಗಳನ್ನು ಮಾಡ ಬೇಕು ಎಂದು ಕೋರಿರುತ್ತಾರೆ.

ಈ ಬಗ್ಗೆ ಸಚಿವ ಸಂಪುಟದ ಸೂಚನೆಯಂತೆ ದಿನಾಂಕ 27-2-98ರಂದು ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಖರೀದಿದಾರರು ಮತ್ತು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳೊಡನೆ ಚರ್ಚಿಸಿ ಈ ಕೆಳಕಂಡಂತೆ ಒಮ್ಮತಕ್ಕೆ ಬರಲಾಯಿತು.

1. ಮಾರಾಟ ಕುರಿತು ಪತ್ರದ ದಿನಾಂಕದಿಂದ ಬಾಕಿ ಬಿಡ್ ಮೊತ್ತ ರೂ. 225.40 ಲಕ್ಷ ಹಾಗೂ ಬಡ್ಡಿ ಮೊತ್ತವನ್ನು ಮೊದಲು ಆರು ತಿಂಗಳು ಸ್ಥಗಿತಗೊಳ್ಳುವಿಕೆಯೊಂದಿಗೆ (ಮಾರಾಟೋರಿಯಂ) 36 ತಿಂಗಳು ಸಮ ಕಂತುಗಳಲ್ಲಿ ಪಾವತಿಸುವುದು. ಕೊಡಬೇಕಾದ ಈ ಬಾಕಿಗೆ ಮೊತ್ತಕ್ಕೆ ಸಮಾನಾದ ಆಸ್ತಿಗಳನ್ನು ಕಾರ್ಖಾನೆ ಕಾರ್ಯಕ್ಕೆ ಅಡಚಣೆ ಉಂಟಾಗದಂತೆ ಸಮಾಪನಾಧಿಕಾರಿಗಳು ಉಳಿಸಿಕೊಳ್ಳುವುದು.

2. ಕಾರ್ಖಾನೆ ಪ್ರಾರಂಭಿಸಲು ಬೇಕಾದ ಸಾಲಗಳನ್ನು ಎತ್ತಲು ಅನುಕೂಲವಾಗುವಂತೆ ಕಾರ್ಖಾನೆಯ ಉಳಿದ ಆಸ್ತಿಗಳನ್ನು ವರ್ಗಾಯಿಸಿ, ನೋಂದಾಯಿಸಿ ಕೊಡುವುದು.

3. 15-3-96ರ ಕರಾರು ಪತ್ರದಂತೆ ಯಾವುದೇ ತಡೆಯಿಲ್ಲದೆ ಸಮಾಪನಾಧಿಕಾರಿಗಳು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದು.

4. ಸರ್ಕಾರವು ಕರಾರಿನಂತೆ ಕಾರ್ಖಾನೆ ಪ್ರಾರಂಭಿಸಲು ಅನುಕೂಲವಾಗುವಂತೆ ಎಲ್ಲಾ ಅಗತ್ಯ ಪರವಾನಿಗೆಗಳನ್ನು ಮತ್ತು ಅನುಮತಿಗಳನ್ನು ಸಂಬಂಧಪಟ್ಟ ಇಲಾಖೆಗಳು ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ದೊರಕಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದು.

5. ಖರೀದಿದಾರರು ಸರ್ಕಾರಕ್ಕೆ ಬಡ್ಡಿ ಮನ್ನಾ ಮಾಡಲು ಮುಂದೆ ಸರ್ಕರಾಕ್ಕೆ ಅರ್ಜಿ ಸಲ್ಲಿಸಲು ಹಕ್ಕು ಉಳ್ಳವರಾಗಿರುತ್ತಾರೆ.

ಕಾರ್ಖಾನೆ ಅತೀ ಶೀಘ್ರವಾಗಿ ಕಾರ್ಯಾರಂಭವಾಗಬೇಕೆಂಬ ಉದ್ದೇಶದಿಂದ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಈ ಕೆಳಕಂಡ ರಿಯಾಯಿತಿಗಳನ್ನು ನೀಡಲು ಸರ್ಕಾರವು ಉದ್ದೇಶಿಸಿದ್ದು ಶೀಘ್ರದಲ್ಲಿ ಆದೇಶವನ್ನು ಹೊರಡಿಸಲಾಗುವುದು.

1. ಖರೀದಿದಾರರಿಂದ ಸುಂದರಿ ಷುಗರ್ಸ್ ಅವರು ನೀಡಬೇಕಾದ ಬಾಕಿ ರೂ.3,46,15,493 (ಅಸಲು 2,30,60,000 ಮತ್ತು ಬಡ್ಡಿ ರೂ 1,15,55,493-00) 6 ತಿಂಗಳ ಮಾರಟೋರಿಯಂ ಪಿರಿಯಡ್ ನಂತರ 36 ಸಮ ಕಂತುಗಳಲ್ಲಿ ಪಾವತಿಸುವುದು. ಮೊದಲನೆ ಕಂತು ರೂ. 9,61,542 ಗಳನ್ನು ದಿನಾಂಕ 1-10-98 ರಂದು ಪಾವತಿ ಮಾಡಬೇಕು.

2. ರೂ. 3,46,15,493 ಮೊತ್ತಕ್ಕೆ ಸಮನಾದ ಆಸ್ತಿಗಳನ್ನು ಸಮಾಪನಾಧಿಕಾರಿಗಳು ಕೊನೆಯ ಕಂತು ಪಾವತಿ ಮಾಡುವರೆಗೂ ಉಳಿಸಿಕೊಳ್ಳುವುದು.

3. ಉಳಿದ ಆಸ್ತಿಗಳನ್ನು ಖರೀದಿದಾರಿಗೆ ವರ್ಗಾಯಿಸುವುದು.

4. ಕೊನೆ ಕಂತಿನಲ್ಲಿ ೧ ಎಂ ಡಿ ಮೊತ್ತ ರೂ. 5.00 ಲಕ್ಷಗಳನ್ನು ಹೊಂದಾಣಿಕೆ ಮಾಡಿಕೊ -ಳ್ಳುವುದು.

5. ಮೇಲೆ ನಿಗದಿಗೊಳಿಸಿರುವ ಮೊತ್ತದ ಮೇಲೆ ಯಾವುದೇ ಬಡ್ಡಿ ವಿಧಿಸಬಾರದು.

ಮಾನ್ಯ ಉಪಾಧ್ಯಕ್ಷರೇ, ನಿನ್ನೆ ಇದರ ಬಗ್ಗೆ ಸಂಬಂಧಪಟ್ಟ ಕಾರ್ಖಾನೆ ಮಾಲೀಕರು, ಸಂಬಂಧಪಟ್ಟ ಕಾರ್ಮಿಕರು, ರೈತ ಪ್ರತಿನಿಧಿಗಳು ಮತ್ತು ಸ್ಥಳೀಯ ಶಾಸಕರೊಡನೆ ಚರ್ಚೆಮಾಡಿ ಆದಷ್ಟು ಕೂಡಲೇ ಕಾರ್ಖಾನೆಯನ್ನು ಪ್ರಾರಂಭಿಸುವುದು, ಅದರ ಜೊತೆಗೆ ಕಾರ್ಮಿಕರ ಉಳಿದಂಥ ಬಾಕಿಯನ್ನು ಕೊಡುವ ಬಗ್ಗೆ ಚರ್ಚೆ ಮಾಡಿದ್ದೆವು. ಸೋಮವಾರ ಮತ್ತೆ ಅದರ ಬಗ್ಗೆ ಸಂಬಂಧಪಟ್ಟ ಶಾಸಕರು, ರೈತಪ್ರತಿನಿಧಿಗಳು, ಕಾರ್ಮಿಕ ಪ್ರತಿನಿಧಿಗಳ ಸಭೆಯನ್ನು ಕರೆದಿದ್ದೇನೆ. ಇದರ ಬಗ್ಗೆ ಕೂಡಲೇ ಇತ್ಯರ್ಥಗೊಳಿಸಿ ಕೂಡಲೇ ಕಾರ್ಮಿಕರ ಬಾಕಿಯನ್ನು ಪಾವತಿಸುವುದು ಒಂದು. ಎರಡನೇಯದಾಗಿ

ಮುಂದಿನ ಹಂಗಾಮಿನಲ್ಲಿ ಕಬ್ಬು ನುರಿಸುವುದನ್ನು ಪ್ರಾರಂಭ ಮಾಡುತ್ತೇವೆ ಎಂದು ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ಈ ದಿಸೆಯಲ್ಲಿ ಸರ್ವಪ್ರಯತ್ನ ಮಾಡಿ ಮುಂದಿನ ಹಂಗಾಮಿನಲ್ಲಿ ಕಬ್ಬು ನುರಿಸುವಿಕೆ ಮತ್ತು ಬಾಕಿ ಕೊಡುವುದನ್ನು ಮಾಡುತ್ತೇವೆ ಎಂದು ತಮ್ಮ ಮೂಲಕ ಮಾನ್ಯಸದಸ್ಯರಿಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಜಿ. ಶಂಕರೇಗೌಡ : ಮಾನ್ಯ ಉಪಾಧ್ಯಕ್ಷರೇ, ನಿನ್ನೆ ಆ ಕಾರ್ಖಾನೆಯ ಸಂಬಂಧಪಟ್ಟವರನ್ನು ಕರೆಯಿಸಿ ಮಾತನಾಡಲಾಗಿ, ಆ ಮಾಲೀಕರ ಪರವಾಗಿ ಯಾರೂ ಬಂದಿರಲಿಲ್ಲ. ಆಡಳಿತ ಮಂಡಳಿಯ ಪರವಾಗಿ ಯಾರೋ ಒಬ್ಬರು ಬಂದಿದ್ದರು. ಅವರು ಸರಿಯಾದ ಉತ್ತರವನ್ನೂ ಕೊಡದೇ, ಮಂತ್ರಿಗಳ ಒತ್ತಡಕ್ಕೆ ಮಣಿದು, ಅದೂ ಅವರು ಒತ್ತಾಯ ಮಾಡಿ, 8 ತಿಂಗಳ ಸಂಬಳದಲ್ಲಿ, 4 ತಿಂಗಳ ಸಂಬಳವನ್ನು ಕೊಡಬೇಕೆಂದು ಮಂತ್ರಿಗಳು ಹೇಳಿದಾಗ, ಅವರು ಆಗಲಿ ನಮ್ಮ ಮಾಲೀಕರನ್ನು ಕಂಡುಬಂದು ಹೇಳುತ್ತೇನೆಂದು ಹೋಗಿದ್ದಾರೆ. ಆದರೆ, ನಮ್ಮಿಂದ ಹೊರಗೆ ಹೋದಮೇಲೆ, ಕಾರ್ಮಿಕ ಮುಖಂಡರನ್ನು ಕರೆದು, ನೀವು ಮಂತ್ರಿಗಳ ಹತ್ತಿರ ಹೋಗಿ ಹೇಳಿದರೆ, ನಿಮಗೆ ದುಡ್ಡು ಬರುತ್ತದೆ ಎಂದು ತಿಳಿದುಕೊಂಡಿದ್ದೀರಾ, ನೀವು ಹೇಗೆ ತೆಗೆದುಕೊಳ್ಳುತ್ತೀರೋ ನೋಡುತ್ತೇನೆಂದು ಹೇಳಿ ಹೋಗಿದ್ದಾನೆ. ಆಮೇಲೆ, ಅವರು ಈ ದುಡ್ಡನ್ನು ಅಷ್ಟು ಬೇಗ ಕೊಡುತ್ತಾರೆಂಬ ಭರವಸೆ ನನಗೆ ಇಲ್ಲ ಮತ್ತು ಆ ಕಾರ್ಖಾನೆಯನ್ನೂ ಸಹ ಚಾಲೂ ಮಾಡುವುದಿಲ್ಲ ಎಂಬ ಅನುಮಾನ ನಮ್ಮ ಭಾಗದಲ್ಲಿ ರೈತರಿಗೆ ಮತ್ತು ಕಾರ್ಮಿಕರಿಗೆ ಉಂಟಾಗಿದೆ. ಏಕೆಂದರೆ, ಆ ಕಾರ್ಖಾನೆಯನ್ನು ತೆಗೆದುಕೊಳ್ಳುವಾಗ 40 ಪರ್ಸೆಂಟ್ ದುಡ್ಡು ಕಟ್ಟಿ, ಉಳಿದ 60 ಪರ್ಸೆಂಟ್ ಹಣಕ್ಕೆ 6 ತಿಂಗಳು ಟೈಮ್ ತೆಗೆದುಕೊಂಡಿದ್ದರು. ಈ ಅವಧಿಯಲ್ಲಿ ದುಡ್ಡು ಕೊಡದಿದ್ದರೆ, ಇದನ್ನು ಸರ್ಕಾರಕ್ಕೆ ಮುಫತ್ ಮಾಡಿಕೊಳ್ಳಬೇಕೆಂದು ಬರೆದುಕೊಟ್ಟಿದ್ದಾರೆ. ಆದರೆ, 2 ವರ್ಷವಾದರೂ ಆ ಕಾರ್ಖಾನೆ ಚಾಲೂ ಆಗಿಲ್ಲ. ಅವರು ಚಾಲನೆ ಮಾಡತಕ್ಕ ಅಭಿಪ್ರಾಯ ಕಾಣುವುದಿಲ್ಲ ಆದಕಾರಣ, ಈಗೇನು ಕಾರ್ಮಿಕರಿಗೆ 8 ತಿಂಗಳ ಸಂಬಳ ಮತ್ತು ರೀಟೈನರಿ, ಗ್ರಾಚ್ಯುಟಿ ಇವೆಲ್ಲಾ ಕೊಡಬೇಕಾಗಿರುತ್ತದೆ, ಇವುಗಳನ್ನು ಕೊಡುವವರೆಗೆ ಆ ಕಾರ್ಖಾನೆಯನ್ನು ಕೊಂಡಂಥ ಮಾಲೀಕರಿಗೆ, ಕಾರ್ಖಾನೆಯನ್ನು ರಿಜಿಸ್ಟರ್ ಮಾಡಿಕೊಡಬಾರದೆಂಬುದು ನನ್ನ ಅಭಿಪ್ರಾಯ. ಏಕೆಂದರೆ, ಆ ಕಾರ್ಖಾನೆಯನ್ನು ಬೇರೆಯವರಿಗೆ ಮಾರಾಟ ಮಾಡುತ್ತಾರೆನ್ನುವ ವಿಚಾರ ನಮಗೆ ಕೇಳಿಬಂದಿರುತ್ತದೆ. ಆದ್ದರಿಂದ .....

ಉಪಾಧ್ಯಕ್ಷರು : ಕ್ಲಾರಿಫಿಕೇಷನ್ ಸಂಕ್ಷಿಪ್ತವಾಗಿ ಕೇಳಬೇಕು, ತಾವು ಕುಳಿತುಕೊಳ್ಳಿ, ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಹೇಳಿದಂತೆ, ನಿನ್ನೆ ಮಾಲೀಕರ ಪರವಾಗಿ ಬಂದಿದ್ದರು. ಅವರ ಜೊತೆಯಲಲ್ಲಿ ಚರ್ಚೆ ಮಾಡಿದ್ದೇನೆ. ಮಾನ್ಯ ಶಾಸಕರೂ ಆ ಸಭೆಯಲ್ಲಿ ಪಾಲ್ಗೊಂಡಿದ್ದರು. ಆ ಕಾರ್ಖಾನೆಯ ಪ್ರತಿನಿಧಿಗಳು, ರೈತಬಾಂಧವರು ಆ ಸಭೆಯಲ್ಲಿ ಪಾಲ್ಗೊಂಡಿದ್ದರು ನಾಳೆ ಸೋಮವಾರ ಬೆಳಿಗ್ಗೆ ಮತ್ತೆ ಆ ಕಾರ್ಖಾನೆಯ ಮಾಲೀಕರನ್ನು ಕರೆಸುತ್ತೇನೆ. ಅದರ ಜೊತೆಗೆ, ಸ್ಥಳೀಯ ಶಾಸಕರನ್ನೂ ಸಭೆಗೆ ಕರೆಸುತ್ತೇನೆ. ಎಲ್ಲರೂ ಕೂಡಿ ಚರ್ಚೆ ಮಾಡಿ, ಸಾಧ್ಯವಾದಷ್ಟುಮಟ್ಟಿಗೆ

ಇದನ್ನು ಇತ್ಯರ್ಥಗೊಳಿಸಲು ಪ್ರಯತ್ನ ಮಾಡುತ್ತೇನೆ. ಇದು ಆಗದೇ ಇದ್ದಲ್ಲಿ, ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವುಗಳನ್ನು ತೆಗೆದುಕೊಂಡು, ಮುಂದಿನ ಹಂಗಾಮಿನೊಳಗಾಗಿ ಆ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ತಮ್ಮ ಮುಖಾಂತರ ಮಾನ್ಯಸದಸ್ಯರಿಗೆ ಹೇಳಬಯಸುತ್ತೇನೆ.

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಮತ್ತೆ ಮಧ್ಯಾಹ್ನ 3 ಗಂಟೆಗೆ ಸೇರುವುದು.

(ಸದನವು, ಮಧ್ಯಾಹ್ನ 1 ಗಂಟೆ 52 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆಗೆ ಸೇರಲು ನಿಶ್ಚಯಿಸಿತು.)

(ಸಭೆಯು 3.35 ನಿಮಿಷಕ್ಕೆ ಮತ್ತೆ ಸಮಾವೇಶಗೊಂಡಿತು)

ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ) ರವರು ಪೀಠವನ್ನು ಅಲಂಕರಿಸಿದ್ದರು

ಗಮನ ಸೆಳೆಯುವ ಸೂಚನೆಗಳು (ಮುಂದುವರಿದುದು)

ತುಂಗಾ ಮೇಲ್ದಂಡೆ ಯೋಜನೆ ಬಗ್ಗೆ

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸನ್ಮಾನ್ಯ ಅಧ್ಯಕ್ಷರೆ ಬಚಾವತ್ ಆಯೋಗದ ತೀರ್ಪಿನ ಪ್ರಕಾರ ತುಂಗಾ ಮೇಲ್ದಂಡೆ ಯೋಜನೆ ಮುಗಿಸುವ ಬಗ್ಗೆ ಭಾರಿ ನೀರಾವರಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

+ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) : ತುಂಗ ಮೇಲ್ದಂಡೆ ಯೋಜನೆಗೆ ರೂ.670 ಕೋಟಿಗಳ ಪರಿಷ್ಕೃತ ಅಂದಾಜು ತಯಾರಿಸಲಾಗಿದೆ. ಈ ಯೋಜನೆಗೆ2:98ರ ವರೆಗೆ ರೂ. 23.3 ಕೋಟಿ ವೆಚ್ಚವಾಗಿದ್ದು, ಈ ಯೋಜನೆಗೆ 12.34 ಟಿಎಂಸಿ ನೀರಿನ ಉಪಯುಕ್ತತೆ ಹೊಂದಿದ್ದು, ಬಚಾವತ್ ಆಯೋಗದ ತೀರ್ಪಿನ ಅನ್ವಯ 2000 ಇಸವಿಯೊಳಗೆ ಪೂರ್ಣಗೊಳಿಸಬೇಕಾಗಿರುತ್ತದೆ.

ಈ ಯೋಜನೆಯ ವರದಿಯನ್ನು ಅನುಮೋದನೆಗಾಗಿ ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿದೆ. ಪ್ರಸ್ತುತ ಕಾಲುವೆಯ 10 ಕಿ.ಮೀ. ವರೆಗಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಪೈಕಿ 1,2, ಮತ್ತು 3 ಕಿ.ಮೀ.ಗಳಲ್ಲಿನ ಕಾಮಗಾರಿಗಳನ್ನು ಇಲ್ಲಿನ ಅರಣ್ಯ ಭೂಮಿಯನ್ನು ನೀರಾವರಿಗೆ ಹಸ್ತಾಂತರಿಸಿದ ನಂತರ ಮುಂದುವರಿಸಲಾಗುವುದು. ಯೋಜನೆಯ ಹೆಡ್ ವರ್ಕ್ಸ್ ಕಾಮಾಗಾರಿಗಳ ಅನುಮೋದನೆ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.

ದಿನಾಂಕ 1-8-97ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಈ ಯೋಜನೆ ಅಡಿ ಬರುವ ಮಾನ್ಯ ಸಂಸತ್ ಸದಸ್ಯರು, ವಿಧಾನಸಭಾ ಸದಸ್ಯರು ಹಾಗೂ ವಿವಿಧ ಇಲಾಖೆಯ